ವಿಷಯ: ಮಂಗಳೂರು ಹ್ಯೊಗೆ ಬಜಾರ್ ನದಿತೀರ ಅಭಿವೃದ್ಧಿ.

1218 (1689)

ಶ್ರೀ ಯೋಗೇಶ್ ಭಟ್ (ಮಂಗಳೂರು): ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

1. ಮಂಗಳೂರು ಹ್ಯೊಗೆ ಬಜಾರ್‌ನ ನದಿ ತೀರದಲ್ಲಿರುವ ಪ್ರಾಕೃತಿಕ ಕ್ರೀಕ್‌ನಲ್ಲಿ ಕಳೆದ ಹಲವು ದಶಕಗಳಿಂದ ಸುಮಾರು 300 ಬೋಟುಗಳು ಮಳೆಗಾಲದಲ್ಲಿ ತಂಗುತ್ತಿರುವುದು ಮಳೆಗಾಲದಲ್ಲಿ ತಂಗುತ್ತಿರುವುದು ಹಾಗೂ ಬೋಟು ದುರಸ್ತಿ ಕಾರ್ಯ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಪ್ರಾಕೃತಿಕವಾದ ಕ್ರೀಕ್‌ನಲ್ಲಿ ಮಣ್ಣು ಅಧಿಕದಷ್ಟು ತುಂಬಿದ್ದು ಇದನ್ನು ತೆಗೆದು ಪುನಃ ಹಿಂದಿನಂತೆ ಉಪಯುಕ್ತಗೊಳಿಸಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳಾವುವು?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ಸಚಿವರು):

1. ಹೌದು, ಮಳೆಗಾಲದಲ್ಲಿ ಬೋಟುಗಳನ್ನು ದುರಸ್ತಿಗೊಳಿಸುವುದಕ್ಕೋಸ್ಕರ ಕ್ರೀಕ್‌ನ ದಡದ ಮೇಲೆ ತರಲಾಗುತ್ತದೆ.

2. ಸಧ್ಯಕ್ಕೆ ಈ ಕ್ರೀಕ್‌ನಲ್ಲಿ ಹೂಳೆತ್ತುವ ಪ್ರಸ್ತಾವನೆ ಇರುವುದಿಲ್ಲ.

ಅಧ್ಯಕ್ಷರು: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಯಿತು. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರ ಗಮನಕ್ಕೆ ತರುವುದೇನೆಂದರೆ, ಮಾನ್ಯ ಸದಸ್ಯರಾದ ಸಭಾಪತಿಯವರು ನನಗೊಂದು ಪತ್ರ ಬರೆದು ಕಳುಹಿಸಿದ್ದಾರೆ. ಅವರು ಕಳುಹಿಸಿರತಕ್ಕ ಪ್ರಶ್ನೆಗಳ ಪೈಕಿ ಸುಮಾರು 80 ಪ್ರಶ್ನೆಗಳಿಗೂ ಮೇಲ್ಪಟ್ಟು ಪ್ರಶ್ನೆಗಳಿಗೆ ವಿವಿಧ ಇಲಾಖಾ ಸಚಿವರುಗಳಿಂದ ಉತ್ತರಗಳು ಬಂದಿಲ್ಲವೆಂದು ಹೇಳಿದ್ದಾರೆ. ತಾವು ದಯಮಾಡಿ, ಅನೇಕ ಸದಸ್ಯರೂ ಇದೇ ಮಾತು ಹೇಳುತ್ತಿದ್ದಾರೆ. ಪೆಂಡಿಂಗ್ ರಿಪ್ಲೈಸ್ ಯಾವು ಇವೆ, ಸ್ವಲ್ಪ ಕ್ವಿಕ್ ಆಗಿ ತರಿಸಿಕೊಡುವುದಕ್ಕೆ ಪ್ರಯತ್ನಪಡಿ.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ ಅನುಚ್ಛೇದ 243-ಐ(4) ಮತ್ತು 243-ವೈ(2)ರನ್ವಯ ರಾಜ್ಯಪಾಲರ ಆದೇಶಾನುಸಾರವಾಗಿ ಹಣಕಾಸು ಆಯೋಗದ ವರದಿಯನ್ನು ಸದನದಲ್ಲಿ ಮಂಡಿಸುತ್ತೇನೆ.